IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಟ್ರಾಯ್ ನಗರದ ಪತನಕ್ಕೆ ಕಾರಣವಾದ ಅಧಿಕಾರ ಮತ್ತು ಅಪಹರಣದ ದಾಹ

**ಡಾ. ಕೃಷ್ಣೋಜಿರಾವ್ ಟಿ.ಎಂ**

ಸಹಾಯಕ ಪ್ರಾಧ್ಯಾಪಕ,ಮೊ: ೭೨೦೪೬೧೮೨೯೭

ಗ್ರೀಕ್ ಮಹಾಕವಿ 'ವರ್ಜಿಲ್' ಬರೆದಿರುವ ಮಹಾಕಾವ್ಯ "ಈನಿಯಡ್" ಇಲ್ಲಿನ ಕಥಾನಾಯಕನೇ 'ಈನಿಯಸ್' ಈ ಕೃತಿ "ಲಾಟಿನ್" ಭಾಷೆಯಲ್ಲಿದೆ.
ಈನಿಯಸ್‌ನು ಸೌಂದರ್ಯ ದೇವತೆಯಾದ 'ವೀನಸ್' ಮತ್ತು ಟ್ರೋಜನ್‌ನ ವೀರನಾದ ಅಂಕೈಸಿಸೀ ರವರ ಮಗನು, ಕ್ರಿಯಾಸ ಎಂಬ ಹೆಂಡತಿ ಮತ್ತು ಆಸ್ಕೇನಿಯಸ್ ಎಂಬ ಮಗ ಇರುತ್ತಾನೆ.
ಯುದ್ಧದಿಂದ ಟ್ರಾಯ್ ನಗರಕ್ಕೆ ಬೆಂಕಿ ಬಿದ್ದಾಗ ಅಲ್ಲಿದ್ದ ಟ್ರೋಜನ್ ಜನರು ಕಂಗಾಲಾಗುತ್ತಾರೆ. ಆಗ ಆ ಟ್ರೋಜನರ ವೀರನಾದ ಈನಿಯಸ್‌ನು ಅಲ್ಲಿ ಬದುಕುಳಿದ ಜನರನ್ನು ಇಪ್ಪತ್ತು ಹಡಗುಗಳಲ್ಲಿ ಕರೆದುಕೊಂಡು ಸಮುದ್ರಯಾನ ಮಾಡಿ ಅಲ್ಲಿಂದ ತಪ್ಪಿಸಿಕೊಳ್ಳತ್ತಾನೆ.
ಹೇಗಾದರು ಮಾಡಿ 'ಇಟಲಿ' ದೇಶಕ್ಕೆ ಹೋಗಿ ಅಲ್ಲಿ ಹೊಸ ಸಾಮ್ರಾಜ್ಯ ಕಟ್ಟಬೇಕೆಂಬ ದೈವಾಜ್ಞೆ ನೆರವೇರಿಸಲು ಸತತವಾಗಿ ಏಳು ವರ್ಷಗಳ ಕಾಲ ಭೂಮಾರ್ಗ - ಸಮುದ್ರ ಮಾರ್ಗ ಮಾಡುತ್ತಿರುತ್ತಾರೆ. ಆದರೆ ಈ ಈನಿಯಸ್‌ನ ಮೇಲೆ ಜೂನೋ ದೇವತೆಯು ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅವರ ಹಡಗುಗಳನ್ನೆಲ್ಲ ಸಮುದ್ರದಲ್ಲಿ ಚಲ್ಲಾಪಿಲ್ಲಿಯಾಗುವಂತೆ ಹಲವಾರು ತೊಂದರೆಗಳನ್ನು ಕೊಡುತ್ತಿರುತ್ತಾಳೆ.

ಇದಕ್ಕೆ ಕಾರಣವೂ ಇದೆ, ಅದೇನೆಂದರೆ **ಜೂನೋದೇವತೆ**ಯು 'ಕಾರ್ತೇಜನಗರ'ದಲ್ಲಿ ವಾಸವಿದ್ದು ಅಲ್ಲಿನ ಜನರಿಂದ ಪೂಜಿಸಲ್ಪಟ್ಟಿರುತ್ತಾಳೆ. ಈ ನಗರ ಅವಳಿಗೆ ಅತ್ಯಂತ ಪ್ರಿಯವಾದ ನಗರವಾಗಿತ್ತು. ಆದರೆ 'ಈ ನಗರವನ್ನು ಟ್ರೋಜನ್ ವಂಶದ ಈನಿಯಡ್‌ನು ಟ್ರಾಯ್ ನಗರದಿಂದ ತಪ್ಪಿಸಿಕೊಂಡು ಇಟಲಿ ನಗರವನ್ನು ಕಟ್ಟಿದ ಮೇಲೆ ಪುನಃ ಮುಂದೊಂದು ದಿನ ಈ ಕಾರ್ಥೇಜನಗರದ ಮೇಲೆ ಯುದ್ಧಕ್ಕೆ ಬಂದು ಇದನ್ನು ಸರ್ವನಾಶ ಮಾಡುತ್ತಾನೆ' ಎಂಬ ವದಂತಿಯನ್ನು ನಂಬಿದ ಜೂನೋ ದೇವತೆಯು ಹೇಗಾದರು ಮಾಡಿ ಈನಿಯಸ್‌ನು ಇಟಲಿ ನಗರವನ್ನು ತಲುಪದಂತೆ ಮಾಡಿ ಅವರನ್ನೆಲ್ಲ ಸರ್ವನಾಶ ಮಾಡಬೇಕು ಎಂದುಕೊಂಡು ಸಮುದ್ರಯಾನದಲ್ಲಿರುವ ಅವರಿಗೆ ಅನೇಕ ತೊಂದರೆಗಳನ್ನು ಕೊಡುತ್ತಾಳೆ.

ಒಂದು ದಿನ ಅವಳು ಸಮುದ್ರದಲ್ಲಿನ ಮಾರುತಗಳ ಒಡೆಯನಾದ **'ಈಯೋಲಸನ'** ದ್ವೀಪಕ್ಕೆ ಹೋಗಿ ಇವಳ ಬಳಿ ಇರುವ ಹದಿನಾಲ್ಕು ಜನ **ಅಪ್ಸರಾ ಸ್ತ್ರೀ**ಯರಲ್ಲಿ ಅತ್ಯಂತ ಸುಂದರಿಯಾದ **'ಡೈಯೋಪಿಯಾ'**ಳನ್ನು ಈಯೋಲಸನಿಗೆ ಮದುವೆ ಮಾಡಿಕೊಡುತ್ತೇನೆಂದು ಅವನಿಗೆ ಆಸೆ ಹುಟ್ಟಿಸುತ್ತಾಳೆ. ಇದಕ್ಕೆ ಪ್ರತಿಯಾಗಿ ಅವನು ತನ್ನಲ್ಲಿ ಬಂದಿಸಿಟ್ಟುಕೊಂಡಿರುವ 'ಗಾಳಿ'ಯನ್ನು ಒಂದೇ ಬಾರಿ ಬಿಟ್ಟು ಈನಿಯಸ್‌ನ ಹಡಗುಗಳನ್ನು ಮುಳುಗಿಸಿ ಅವರನ್ನು ಸಾಯಿಸಬೇಕೆಂದು ಅವಳು ಹೇಳಿದಾಗ ಅವನು ಖಡ್ಗದಿಂದ ಮಾರುತಕ್ಕೆ ಹೊಡೆಯುತ್ತಾನೆ. ಇದರಿಂದ ಅಲ್ಲಿ ಭೀಕರ ಬಿರುಗಾಳಿ ಎದ್ದು ಸಮುದ್ರದಲ್ಲಿನ ಹಡಗುಗಳು ದಿಕ್ಕಾಪಾಲಾಗಿ ಮುಳುಗಿ - ಎದ್ದು- ತೇಲಿ ಬಂಡೆಗಳಿಗೆ ಅಪ್ಪಳಿಸುತ್ತವೆ.

ಆಗ ಇವರು ಟ್ರಾಯ್‌ನಗರದಿಂದ ತಂದಿದ್ದ ವಸ್ತ್ರಾಭರಣಗಳು, ಆಹಾರಧಾನ್ಯಗಳು, ಯುದ್ಧಸಾಮಾಗ್ರಿಗಳು ನೀರುಪಾಲಾಗಿ ಅಲ್ಲಿನ ಜನರು ನೀರಿನಲ್ಲಿ ಮುಳುಗಿ ಸಾವು – ಬದುಕಿನ ನಡುವೆ ಹೋರಾಡುವಂತಾಗುತ್ತದೆ. ಆಗ ಅಲ್ಲಿದ್ದ **ಸಮುದ್ರ ದೇವತೆ ನಪ್ಚೂನ್** ದೇವತೆಗೆ ಇದೆಲ್ಲಾ **'ಜೂನೋ'** ದೇವತೆಯ ಕುತಂತ್ರ ಎಂದು ತಿಳಿದು ಬೀಸುತ್ತಿದ್ದ ಮಾರುತಗಳಿಗೆ ಬೈಯುತ್ತಾನೆ. 'ನನ್ನ ಅನುಮತಿ ಇಲ್ಲದೆ ನೀವು ಗಾಳಿ ಬೀಸಿದರೆ ಅದಕ್ಕೆ ತಕ್ಕ ಶಿಕ್ಷೆ ಅನುಭವಿಸುತ್ತೀರಿ' ಎಂದಾಗ ಆ ಗಾಳಿಯು ಇದ್ದಕ್ಕಿದ್ದಂತೆ ನಿಂತುಹೋಗುತ್ತದೆ. ಯಾಕೆಂದರೆ ಸಮುದ್ರದ ಮೇಲೆ ಯಜಮಾನಿಕೆ 'ಈಯೋಲಸ'ನದ್ದಲ್ಲ ಅದು 'ನೆಪ್ಚೂನ್' ದೇವತೆಯದ್ದಾಗಿರುತ್ತದೆ.

ಗಾಳಿ – ಮಾರುತಗಳ ಆರ್ಭಟವೇನಿದ್ದರು ಗುಹೆಯ ಒಳಗಿರಬೇಕೇ ವಿನಃ ಸಮುದ್ರದ ಮೇಲಲ್ಲ ಎಂದು ನಪ್ಚೂನ್ ಕೋಪಗೊಳ್ಳುತ್ತಾನೆ. ಅಂತು ನೆಪ್ಚೂನ್ ದೇವತೆಯ ಸಹಾಯದಿಂದ ಈನಿಯಸ್ ಮತ್ತು ಅವನ ಹಡಗು ಪಡೆಯವರು ಪ್ರಾಣಾಪಾಯದಿಂದ ಪಾರಾಗಿ **ಉತ್ತರ ಆಫ್ರಿಕಾ ಖಂಡದ 'ಲಿಬ್ಯಾ'** ದೇಶದ ಬಂದರನ್ನು ಬಂದು ತಲುಪುತ್ತಾರೆ.

ಇಪ್ಪತ್ತು ಹಡಗುಗಳ್ಳಲ್ಲಿ ಏಳು ಹಡಗುಗಳು ಮಾತ್ರ ಉಳಿದಿರುತ್ತವೆ. ಅಲ್ಲಿ ಬೆಣಚುಕಲ್ಲಿಂದ ಬೆಂಕಿ ಮಾಡಿ ಅಳಿದುಳಿದ ದವಸ–ಧಾನ್ಯದಿಂದ ಅಡುಗೆ ಮಾಡಲು ತೊಡಗುತ್ತಾರೆ. ಆಗ ಈನಿಯಸ್‌ನು ಏಳು **ಜಿಂಕೆ**ಗಳನ್ನು ಕೊಂದು ಏಳು ಹಡಗುಗಳಿಗೂ ಒಂದೊಂದು ಹಂಚುತ್ತಾನೆ. ಕಂಗಾಲಾಗಿದ್ದ ಅವರಿಗೆ ಧೈರ್ಯವನ್ನು ಹೇಳಿ, ನಾವು ಹೇಗಾದರು ಮಾಡಿ **ಇಟಲಿ ನಗರಕ್ಕೆ ಹೋಗಿ ಮತ್ತೆ 'ಟ್ರಾಯ್'ನಗರವನ್ನು ಕಟ್ಟಲೇಬೇಕು** ಎಂದು ಹೇಳುತ್ತಾನೆ.

ಇತ್ತ **ಈನಿಯಸ್‌ನ ತಾಯಿ 'ವೀನಸ್ ದೇವತೆ'**ಯು ತನ್ನ ಮಗನಿಗೆ **ಜೂನೋದೇವ ತೆಯು ತೊಂದರೆ ಕೊಡುವ ವಿಚಾರ**ವನ್ನು ತನ್ನ ತಂದೆಯಾದ **'ಜ್ಯೂಪಿಟರ್'**ಗೆ ಹೇಳುತ್ತಾಳೆ. ಹೇಗಾದರು ಮಾಡಿ ಮಗನನ್ನು ಕಾಪಾಡಬೇಕೆಂದು ಬೇಡಿಕೊಳ್ಳುತ್ತಾಳೆ.

ಗ್ರೀಕರು ಟ್ರಾಯ್ ನಗರವನ್ನು ಹಾಳುಮಾಡಿದರು, ಈಗ ಈ ಟ್ರಾಯ್ ಜನ ಇಟಲಿಗೆ ಹೋಗಿ ಹೊಸ ರೋಮ್ ಸಾಮ್ರಾಜ್ಯ ಕಟ್ಟುತ್ತಾರೆಂದರೆ ಅದಕ್ಕೆ ಜೂನೋ ದೇವತೆ ಅಡ್ಡಬರುತ್ತಾಳೆ ಎಂದು ಹೇಳುತ್ತಾಳೆ.
ಆಗ ಅವಳ ತಂದೆ ಜ್ಯೂಪಿಟರನು ಅವಳ ಮಗ ಈನಿಯಸ್‌ನನ್ನು ತಾನು ಕಾಪಾಡುವುದಾಗಿ ಮಾತುಕೊಡುತ್ತಾನೆ. ಮತ್ತು ಈನಿಯಸ್ **ಇಟಲಿಯಲ್ಲಿ 'ಲ್ಯಾವಿನಿಯಮ್'** ನಗರ ಕಟ್ಟೇಕಟ್ಟುತ್ತಾನೆಂಬ ಭವಿಷ್ಯವನ್ನೂ ಹೇಳುತ್ತಾನೆ. ಜೊತೆಗೆ ಈಗಾಗಲೆ ಈನಿಯಸ್‌ನು ಕಾರ್ಥೇಜ ನಗರದ ಸಮುದ್ರ ತೀರದಲ್ಲಿರುವುದರಿಂದ **ಕಾರ್ಥೇಜದ ರಾಣಿ ಡೈಡೋಳ**ಗೆ **ಸಂದೇಶ ದೇವತೆಯಾದ ಮರ್ಕ್ಯುರಿ** ದೇವತೆಯ ಮೂಲಕ ಈನಿಯಸ್‌ನಿಗೆ ಸ್ವಾಗತಕೋರಿ ಸಹಾಯ ಮಾಡಬೇಕೆಂಬ ಸಂದೇಶವನ್ನು ಹೇಳಿ ಕಳುಹಿಸುತ್ತಾನೆ.

ಇತ್ತ ಈನಿಯಸ್‌ನು ಅಲ್ಲೇ ರಾತ್ರಿಕಳೆದು ಬೆಳಗಾದ ಮೇಲೆ ತಾವಿರುವ ಜಾಗ ಯಾವುದು ಎಂಬುದನ್ನು ತಿಳಿಯಲು ತನ್ನ **ಗೆಳೆಯ 'ಅಕಾಟೀಸ'**ನೊಂದಿಗೆ ಕಾಡುದಾರಿಯಲ್ಲಿ ಹೋಗುತ್ತಿರಬೇಕಾದರೆ ಅವನ **ತಾಯಿ ವೀನಸ್ ದೇವತೆಯು ಬೇಡತಿಯ ವೇಷ**ಧರಿಸಿ ಅವರನ್ನು ಮಾತನಾಡಿಸುತ್ತಾಳೆ. ಆಗ ಇವಳಾರೋ ದೇವತೆಯಿರಬೇಕು, ಬೇಡತಿಯಾಗಲು ಸಾಧ್ಯವಿಲ್ಲವೆಂದು ತಿಳಿದು ತಮಗೆ ಸಹಾಯ ಮಾಡಬೇಕೇಂದು ಕೇಳಿಕೊಳ್ಳುತ್ತಾರೆ. ನಾವೀಗ ಎಲ್ಲಿದ್ದೇವೆ? ಇದು ಯಾವ ಭೂಮಿ? ಯಾವ ದೇಶ? ನಾವು ಇಲ್ಲಿಗೆ ಹೊಸಬರು **ಚಂಡಮಾರುತದ ಹೊಡೆತಕ್ಕೆ ಸಿಕ್ಕಿ ಇಲ್ಲಿ ಬಂದಿದ್ದೇವೆ** ಎಂದು ಕೇಳಿಕೊಳ್ಳುತ್ತಾರೆ.

ಆಗ ಅವಳು ನಾನು ಯಾವ ದೇವತೆಯೂ ಅಲ್ಲ ಎಂದು ಹೇಳಿ ಈ ದೇಶ **ಆಫ್ರಿಕಾ** ಖಂಡ. ಇದನ್ನು **ಟೈರ್‌ನಗರದಿಂದ ಬಂದ 'ಫಿನೀಷಿಯನ್'ಜನ ಆಳುತ್ತಿದ್ದಾರೆ**. ಈ ಆಫ್ರಿಕಾದ ಸುತ್ತ **ಲಿಬ್ಯಾದೇಶ** ಸುತ್ತುವರೆದಿದ್ದು ಈ ಲಿಬ್ಯನರು ಯುದ್ಧ ಮಾಡುವುದರಲ್ಲಿ ಬಹಳ ಗಟ್ಟಿಗರು. ಒಟ್ಟಾರೆ ಈ ಜಾಗವನ್ನು **'ಕಾರ್ಥೇಜ'** ಎನ್ನುತ್ತಾರೆ. ಈ ಕಾರ್ಥೇಜದ ರಾಣಿಯ ಹೆಸರು **'ಡೈಡೋ'** ಇವಳು ಇವಳ ಸೋದರನ ಕಾಟ ತಾಳಲಾರದೆ **ಟೈರ್** ದೇಶದಿಂದ ಈ ಕಾರ್ಥೇಜ ದೇಶಕ್ಕೆ **ಓಡಿ** ಬಂದಿದ್ದಾಳೆ ಎನ್ನುತ್ತಾಳೆ. ಇವಳು ಫಿನೀಷಿರಲ್ಲೇ ಶ್ರೀಮಂತ ಜಮೀನ್ದಾರನಾದ **'ಸಿಕೀಯಸ್'**ನನ್ನು ಮದುವೆಯಾಗಿದ್ದಳು. ಆದರೆ ಇವಳ ಸೋದರ ಕ್ರೂರಿಯಾದ **'ಪಿಗ್ಮೇಲಿಯನ್'** ಎಂಬುವವನು ಸಂಪತ್ತಿನ ಆಸೆಗಾಗಿ ತನ್ನ ಸೋದರಿಯ ಗಂಡನನ್ನೇ ಕತ್ತಿಯಿಂದ ತಿವಿದು **ಕೊಂದಿ**ದ್ದಾನೆ.

ಹೀಗೆ ಒಂದು ದಿನ ರಾತ್ರಿಯಲ್ಲಿ ಡೈಡೋಳ ಕನಸಿನಲ್ಲಿ ಇವಳ ಗಂಡ ಕಾಣಿಸಿಕೊಂಡು ತನ್ನನ್ನು ಇವಳ ಸೋದರ ಕೊಂದನೆಂದು ಹೇಳಿ, ನಿನ್ನನ್ನು ಅವನು ಆಸ್ತಿಯ ಆಸೆಯಿಂದ ಕೊಲೆ ಮಾಡುವ ಮೊದಲು ಇಲ್ಲಿಂದ ಓಡಿಹೋಗು ಎಂದು ಹೇಳಿದಾಗ ದುಃಖಿತಳಾದ ಅವಳು ಅವಳ ಸೋದರನಿಂದ ಈ ರೀತಿ ಇನ್ನೂ ಅನೇಕರು ಮೋಸಕ್ಕೊಳಗಾದವರನ್ನೆಲ್ಲ ಒಟ್ಟುಗೂಡಿಸಿ ಸಂಪತ್ತನ್ನೆಲ್ಲ ಗಂಟು ಮೂಟೆ ಕಟ್ಟಿ ರಾತ್ರೋರಾತ್ರಿ ಅಲ್ಲಿಂದ ಓಡಿ ಬಂದು ಈ ಕಾರ್ಥೇಜನಗರದ ಕೋಟೆ ಕಟ್ಟಿ ಇಲ್ಲಿ ವಾಸವಾಗಿದ್ದಾರೆ ಎನ್ನುತ್ತಾಳೆ.

ಏಷ್ಯಾ ಮತ್ತು ಯೂರೋಪ್ ಖಂಡಗಳ ನೆಲೆ ತಪ್ಪಿದ ಈನಿಯಸ್ ಈಗ **ಆಫ್ರಿಕಾ** ಖಂಡಕ್ಕೆ ಬಂದಿದ್ದೇನೆ ಅಲ್ಲಿ ನನ್ನ ತಾಯಿಯು ನನ್ನ ರಕ್ಷಕಳಾಗಿದ್ದಳು. ಈಗ ಅವಳ ಕರುಣೆಯೂ ತಪ್ಪಿದೆ ಎಂದು ದುಃಖಿಸುತ್ತಾನೆ. ಅವನನ್ನು ಸಮಾಧಾನ ಮಾಡಿದ ಆ ಬೇಡತಿಯು ನೀನು ಈಗಲೇ ಕಾರ್ಥೇಜನ ರಾಣಿ ಡೈಡೋಳನ್ನು ಕಂಡು ಅವಳ ಅತಿಥಿ ಸತ್ಕಾರವನ್ನು ಪಡೆದು ಮುಂದೆ ಅವಳಿಂದ ಅನೇಕ ಸಹಾಯವನ್ನು ಪಡೆದು **ಇಟಲಿ** ದೇಶಕ್ಕೆ ಹೋಗು ಎಂದು ಹೇಳಿ ಅಲ್ಲಿಂದ ಮಾಯವಾಗುತ್ತಾಳೆ.

ಇವನು ಆ ನಗರವನ್ನು ಹುಡುಕುತ್ತಾ ಮುಂದೆ ಹೋದಾಗ ಒಂದು ಕಾಲದಲ್ಲಿ ಕೇವಲ ಹಳ್ಳಿಯಾಗಿದ್ದುದು ಈಗ ಎಲ್ಲೆಲ್ಲೂ ಭವ್ಯ ಭಂಗಲೆಗಳೆದ್ದಿದ್ದವು, ನಗರೀಕರಣಕ್ಕೊಳಗಾಗಿತ್ತು, ಚರಂಡಿ, ರಸ್ತೆ, ದೇವಾಲಯ, ಕೊಳ, ನಾಟ್ಯ ಮಂದಿರ, ಕಾನೂನಿನ ರಚನೆ ಹೀಗೆ ಅನೇಕ ರೀತಿಯ ಜನಪರವಾದ ಕೆಲಸಗಳನ್ನು ಸಾಂಸ್ಕೃತಿಕ ತಾಣಗಳನ್ನು ಮಾಡಿದ್ದಳು.

ರಾಣಿ ಡೈಡೋ **ಜೂನೋ** ದೇವಾಲಯವನ್ನು ಕಟ್ಟಿಸಿದ್ದಳು. ದೇವಾಲಯದ ಗೋಡೆಗಳ ಮೇಲೆ **ಟ್ರೋಜನ್ ಯುದ್ಧದ ಚಿತ್ರ, ಅಗೆಮೆನ್, ಅಕಿಲೀಸ್** ಮೊದಲಾದವರ ಚಿತ್ರ ಬಿಡಿಸಿದ್ದರು. ಇದು ತಾವು ಮಾಡಿದ ಟ್ರೋಜ ನ್ ಯುದ್ಧದ ಚಿತ್ರವೆಂದು ಈನಿಯಸ್‌ಗೆ ಹೆಮ್ಮೆಯಾಯಿತು. ಅವನು ಆ ದೇವಾಲಯದ ಬಳಿಯೇ ಕುಳಿತು ರಾಣಿ ಡೈಡೋಳಿಗಾಗಿ ಕುಳಿತಿರುವಾಗ ಸೌಂದರ್ಯದ ಗಣಿಯಂತಿರುವ ಸುಂದರಿಯಾದ ರಾಣಿ ಅನೇಕ ಯುವತಿಯರ ಸಮೇತ ಅಲ್ಲಿಗೆ ಬಂದಳು. ಅವಳ ಸುತ್ತ ಅನೇಕರು ಟ್ರೋಜನ್ ಯುದ್ಧದಿಂದ ಪಾರಾದ ತನ್ನ ಅನೇಕ ಸ್ನೇಹಿತರು ಬಂದದ್ದನ್ನು ನೋಡಿ ಇವನಿಗೆ ಆಶ್ಚರ್ಯವಾಯಿತು.

ಆದರೆ ಡ್ಯೂಡೋರಾಣಿ ಮತ್ತು ಈನಿಯಸ್ ಪರಸ್ಪರ ನೋಡಿ ಮಾತನಾಡುವಷ್ಟರಲ್ಲಿ **ವೀನಸ್ ದೇವತೆ** ಕವಿಸಿದ್ದ **ಮಂಜಿನ ಪರದೆ**ಯಿಂದಾಗಿ ಪರಸ್ಪರ ನೋಡಲಾಗಲಿಲ್ಲ. ತಾವು ಚಂಡಮಾರುತಕ್ಕೆ ಸಿಲುಕಿ ದಾರಿ ತಪ್ಪಿ ಇಲ್ಲಿಗೆ ಬಂದಿರುವುದರಿಂದ ನಿರ್ಗತಿಕರಾದ ತಮಗೆ ಸಹಾಯ ನೀಡಬೇಕೆಂದು, ನಾವು ನಿಮ್ಮ ಮೇಲೆ ಯುದ್ಧ ಮಾಡಲು ಬಂದವರೂ ಅಲ್ಲ, ರಾಜ್ಯ ವಿಸ್ತಾರ ಮಾಡಲೂ ಬಂದವರಲ್ಲ, **ನಾವು ಟ್ರೋಜನರು**, ನಮ್ಮ ದೇಶ ಸುಟ್ಟಿದ್ದರಿಂದ ನಾವು **ಇಟಲಿಗೆ ಹೋಗಿ ಹೊಸ ರಾಜ್ಯ ಕಟ್ಟಬೇಕೆಂದಿದ್ದೇವೆ ನಮಗೆ ಸಹಾಯ ಮಾಡಿ**. ನಮಗೆ **ಟ್ರೋಜನ್ನಿನ ಈನಿಯಸನು ರಾಜನು** ಅವನು ಸಜ್ಜನ, ಸತ್ಯವಂತ, ವೀರಪುರುಷ ಇನ್ನೂ ಬದುಕಿದ್ದಾನೆ ಹಾಗಾಗಿ ನಮಗೆ ಆಹಾರ, ವಸ್ತ್ರ, ಯುದ್ಧೋಪಕರಣ, ಹಡಗು ರಿಪೇರಿಗೆ ಕಾಡಿನ ಮರಗಳು ಒದಗಿಸಿದರೆ ನಾವು ಇಟಲಿಗೆ ಹೋಗುತ್ತೇವೆ ನಿಮ್ಮ ಋಣ ಮರೆಯುವುದಿಲ್ಲ ಎನ್ನುತ್ತಾರೆ.

ಆಗ ರಾಣಿಯು ನಿಮ್ಮನ್ನು ಗ್ರೀಕರು ಸುಟ್ಟದ್ದು, ಟ್ರಾಯ್‌ಪತನ, ಈನಿಯಸ್‌ನ ವಿಚಾರ ಎಲ್ಲಾ ನಮಗೆ ಗೊತ್ತಿದೆ. ಇದು ನಿಮ್ಮ ನಗರವೆಂದೇ ತಿಳಿದುಕೊಳ್ಳಿ ಇಲ್ಲಿ ಹಾಯಾಗಿರಿ, ನಿಮಗೆ ಬೇಕಾದ ಸಹಾಯ ನಾವು ಮಾಡುತ್ತೇವೆ. ಈಗ ನಿಮ್ಮ ಜೊತೆ ಈನಿಯಸ್‌ನೂ ಇದ್ದಿದ್ದರೆ ನನಗೆ ತುಂಬಾ ಸಂತೋಷವಾಗುತ್ತಿತ್ತು ಎಂದು ಹೇಳುತ್ತಾಳೆ. ಆಗ ಅಲ್ಲಿಯೇ ಇದ್ದ **ಈನಿಯಸ್** ತನ್ನ ಪರಿಚಯ ಮಾಡಿಕೊಳ್ಳುತ್ತಾನೆ. ಇದ್ದಕ್ಕಿದ್ದಂತೆ ಅಲ್ಲಿ ಕವಿದಿದ್ದ ಮಂಜು ದೂರವಾಗಿ ಈನಿಯಸ್‌ನು ಒಬ್ಬ ಸ್ವರ್ಗದ ದೇವತೆಯಂತೆ ಸುಂದರವಾಗಿ ಕಾಣುತ್ತಾನೆ. ಸತ್ತ ಟ್ರೋಜನ್ ಜನರಿಗೆ ಮರುಗುವ ರಾಣಿ ಡೈಡೋಳಿಗೆ ಕೃತಜ್ಞತೆ ಸಲ್ಲಿಸುತ್ತಾನೆ. ಅತೀ ಸುಂದರ, ವೀರನಾದ ಈನಿಯಸ್‌ನ ಸೌಂದರ್ಯಕ್ಕೆ ರಾಣಿ ಡೈಡೋ ಆಶ್ಚರ್ಯಳಾಗುತ್ತಾಳೆ. ನದೀತೀರದಲ್ಲಿ **ಅಂಕೈಸೀಸ**ನನ್ನು ಕಂಡ **ವೀನಸ್** ದೇವತೆ ಪ್ರೀತಿಸಿ ಅವರಿಬ್ಬರಿಗೂ ಹುಟ್ಟಿದ ಮಗ **ಈನಿಯಸ್‌ನ**ನ್ನು ಕಂಡು ಖುಷಿ ಪಡುತ್ತಾಳೆ. ಟ್ರೋಜನ್ನಿನ ವೀರರು ಅವರ ಶತ್ರುಗಳು, ಜನಗಳು ಎಲ್ಲರ ಬಗ್ಗೆಯೂ ತನಗೆ ಗೊತ್ತಿದೆ ಎನ್ನುತ್ತಾಳೆ. ಅವರಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು, ಊಟೋಪಚಾರಗಳನ್ನು ಸಿದ್ಧಗೊಳಿಸಿಕೊಡುತ್ತಾಳೆ.

ಈ ಮಧ್ಯೆ ಈನಿಯಸ್‌ನ ತಾಯಿ ವೀನಸ್ ದೇವತೆಯು ರಾಣಿಗೆ ಅಮೂಲ್ಯವಾದ ಉಡುಗೊರೆಗಳನ್ನು ಕೊಡಿಸಿ **ರಾಣಿಗೆ ಇವನ ಮೇಲೆ ಗಾಢ ಪ್ರೇಮ** ಮೂಡುವಂತೆ ಮಾಡಿಸುತ್ತಾಳೆ. ಯಾವ ಶಕ್ತಿ ಬಂದರೂ ಅವರಿಬ್ಬರ ಪ್ರೇಮ ಕಿತ್ತುಹೋಗಬಾರದಂತೆ ನೋಡಿಕೊಂಡಿರುತ್ತಾಳೆ. ಆಗ ರಾಣಿ ಡೈಡೋಳು ಈಗಾಗಲೆ ಸತ್ತಿರುವ **ತನ್ನ ಮೊದಲ ಗಂಡ ಸಕೀಯಸ**ನ ನೆನಪನ್ನು ಅಳಿಸಿ ಅವಳ ಬತ್ತಿದ ಎದೆಯಲ್ಲಿ ಈನಿಯಸ್‌ನ ಮೇಲೆ ಗಾಢ ಪ್ರೇಮವುಂಟಾಗಿ ಅವನನ್ನು ಪ್ರೀತಿಸತೊಡಗುತ್ತಾಳೆ.

**ಟ್ರಾಯ್ ನಗರದ ಪತನ**

ಡೈಡೋಳಲು ಏರ್ಪಡಿಸಿದ್ದ ಆ ಸಭೆಯಲ್ಲಿ ಟ್ರೋಜನ್ ಸಾಮ್ರಾಜ್ಯವನ್ನು, ಟ್ರಾಯ್ ನಗರವನ್ನು, ಗ್ರೀಕರು ಹೇಗೆ ನಾಶ ಮಾಡಿದರೆಂದು ಹೇಳಿ ತಾವು ಹೇಗೆ ಅಲ್ಲಿಂದ ಪಾರಾದೆವೆಂಬ ಕತೆಯನ್ನು ಹೇಳುತ್ತಾನೆ.
ಟ್ರಾಯ್ ನಗರವನ್ನ ನಾಶಮಾಡಲು ಗ್ರೀಕರು ಎಷ್ಟೇ ಬಾರಿ ಪ್ರಯತ್ನ ಮಾಡಿದರು ಸಾಧ್ಯವಾಗಲೇ ಇರದಿರುವಾಗ **ಗ್ರೀಕರಿಗೆ 'ಮಿನರ್ವದೇವತೆ'ಯು ಸ್ಫೂರ್ತಿ ಮತ್ತು ಸಹಾಯ ಮಾಡಿದ್ದರಿಂದ** ಅವರು ಒಂದು ಹೊಸ **ಮೋಸದ ತಂತ್ರಗಾರಿಕೆ**ಯನ್ನು ಮಾಡಿದರು.

ಅದೇಂದರೆ: ಒಂದು **ಮರದಲ್ಲಿ ದೊಡ್ಡದಾದ ಕುದುರೆಯ**ನ್ನು ಮಾಡಿ ಅದರ ಟೊಳ್ಳಾದ ಹೊಟ್ಟೆಯಲ್ಲಿ ಗ್ರೀಕ್ ಸೈನಿಕರು ಶಸ್ತ್ರಾಸ್ತ್ರಗಳೊಂದಿಗೆ ಅಡಗಿಕುಳಿತಿದ್ದರು. 'ಈ ಮರದ ಕುದುರೆಯನ್ನು ತಾವು ಸೋತುದರ ಫಲವಾಗಿ ಮಿನರ್ವದೇವತೆಗೆ ಅರ್ಪಿಸಿದ್ದೇವೆ ಇದನ್ನು ಕೋಟೆಯ ಒಳಗೆ ತೆಗೆದುಕೊಳ್ಳಿ' ಎಂದು ಹೇಳಿ ಅದನ್ನು ದ್ವಾರದಲ್ಲೇ ಬಿಟ್ಟು ಇನ್ನುಳಿದ ಶಸ್ತ್ರಸಜ್ಜಿತ ಗ್ರೀಕ್ ಸೈನಿಕರು ಅಲ್ಲೇ ಪಕ್ಕದ ದ್ವೀಪದಲ್ಲೇ ಅಡಗಿಕೊಂಡು ಕುಳಿತಿದ್ದರು.
ಆದರೆ ಅವರ ಈ ಮೋಸವನ್ನು ತಿಳಿಯದ ಟ್ರಾಯ್‌ನಗರದ ಜನರು ಗ್ರೀಕರು ಹಿಂದಿರುಗಿದ್ದಾರೆಂದೇ ತಮ್ಮ ರಾಜ್ಯಕ್ಕೆ ರಾಜ್ಯಕ್ಕೆ ಹೊರಟು ಹೋಗಿದ್ದಾರೆ ಎಂದು ತಪ್ಪು ತಿಳಿದು ಉಡುಗೊರೆಯಾಗಿ ಬಂದ ಆ **ಮರದ ಕುದುರೆ**ಯನ್ನು ಕೋಟೆಯ ಒಳಗೆ ತಂದಿರಿಸಿದರು. ಸಮುದ್ರದ ಬಳಿ ಹೋಗಿ ಗ್ರೀಕರ ಹಡಗುಗಳಿಲ್ಲದ್ದಿದ್ದುದನ್ನ ಕಂಡು ಸಂಭ್ರಮಿಸಿದರು.

ಆದರೆ ಕೋಟೆಯ ಮೇಲೆ ಕಾವಲು ಕಾಯುತ್ತಿದ್ದವನು ಓಡಿ ಬಂದು ದ್ವೀಪದಿಂದ ಗ್ರೀಕ್ ಸೈನಿಕರು ಇತ್ತ ಬರುತ್ತಿರುವುದನ್ನೂ, ಹಾಗೂ ಕುದುರೆಯ ಹೊಟ್ಟೆಯ ಒಳಗೆ ಗ್ರೀಕ್ ಸೈನಿಕರು ಅಡಗಿ ಕುಳಿತಿರುವ ವಿಚಾರವನ್ನು ಟ್ರೋಜನ್ ಜನರಿಗೆ ತಿಳಿಸುತ್ತಾನೆ. ಈಗ ಈ ಕೋಟೆಯ ಒಳಗೂ ಶತ್ರುಗಳಿದ್ದಾರೆ, ಹೊರಗೂ ಶತ್ರುಗಳಿದ್ದಾರೆ ಹಾಗಾಗಿ ಶತ್ರುಗಳಿಂದ ಗ್ರೀಕರು ಎಂತಹ ಕಾಣಿಕೆ ಕೊಟ್ಟಿದ್ದರೂ ನಾವು ಅದನ್ನು ಅನುಮಾನದಿಂದಲೇ ನೋಡಬೇಕೆಂದು ಹೇಳಿ ಕುದುರೆಯನ್ನ ಪರೀಕ್ಷಿಸಲು ತನ್ನ ಕತ್ತಿಯಿಂದ ಅದರ ಹೊಟ್ಟೆಗೆ ತಿವಿಯುತ್ತಾನೆ. ಆಗ ಅದರ ಹೊಟ್ಟೆ ಕತ್ತಿಯ ಶಬ್ಧದಿಂದ ಟೊಳಗುಟ್ಟಿತ್ತು.

ಆಗಲೇ ಇವರೆಲ್ಲ ಆ ಶತ್ರುಗಳನ್ನ ಹಿಡಿಯಬಹುದಿತ್ತು ಆದರೆ ದುರಾದೃಷ್ಟ ಹಾಗಾಗದೆ ಅವರಾರು ಅದರ ಮೇಲೆ ಅನುಮಾನ ಪಡಲಿಲ್ಲ. ಈ ಮಧ್ಯೆ **ಗ್ರೀಕ್‌ನ ಒಬ್ಬ ಯುವಕ ಸಿನೋನ** ಎಂಬುವವನು ಬೇಕಾಗಿಯೇ ಕುರಿಕಾಯುವವರ ಕೈಗೆ ಸಿಕ್ಕಿಬಿದ್ದದ್ದು ಒಂದು ಕುತಂತ್ರವೇ ಆಗಿತ್ತು. ಅವನನ್ನು ವಿಚಾರಿಸಿದಾಗ ತಾನು ಗ್ರೀಕ್ ವ್ಯಕ್ತಿಯೇನೋ ನಿಜ ಆದರೆ ಅವರೆಲ್ಲ ದೋಣಿ ಹತ್ತಿ ಹೋಗುವಾಗ ನನ್ನೊಬ್ಬನನ್ನೆ ಇಲ್ಲಿ ಮರೆತು ಬಿಟ್ಟುಹೋಗಿದ್ದಾರೆ. ನಾವು ತುಂಬಾ ಬಡವರು ಹಾಗಾಗಿ ನನ್ನ ತಂದೆ ಚಿಕ್ಕ ವಯಸ್ಸಿನಲ್ಲೇ ಗ್ರೀಕ್ ಸೈನ್ಯಕ್ಕೆ ಸೇರಿಸಿದನು. ಅಲ್ಲಿ ಯೂಲಿಸಿಸ್ಸನು, ಪಲಮಿಡೀಸನನ್ನು ಕೊಲ್ಲಿಸಿದನು.

ನನ್ನನ್ನು ಸಾಕಿದ ಪಲಮಿಡೀಸನನ್ನು ಕೊಂದ ಆ ಗ್ರೀಕರ ಮೇಲೆ ಊರಿಗೆ ಹೋದ ಮೇಲೆ ನಾನು ಸೇಡು ತೀರಿಸಿಕೊಳ್ಳುತ್ತೇನೆ ಎಂಬ ಮಾತು ಯೂಲಿಸಿಸ್ಸನು ಕೇಳಿಸಿ ಕೊಂಡು, ದೇವತೆಗೆ ನನ್ನನ್ನು ನರಬಲಿ ಕೊಡಬೇಕೆಂದು ಅವನು ತೀರ್ಮಾನಿಸಿ ನನ್ನನ್ನು ಸರಪಳಿಯಿಂದ ಕಟ್ಟಿಹಾಕಿದಾಗ ನಾನು ಅವರಿಂದ ತಪ್ಪಿಸಿಕೊಂಡು ಇಲ್ಲಿಗೆ ಓಡಿ ಬಂದಿದ್ದೇನೆ. ಈಗ ನೀವು ಬೇಕಾದರೆ ನನ್ನನ್ನು ಕೊಂದುಬಿಡಿ ಎಂದು ಅಳತೊಡಗುತ್ತಾನೆ. ಇವನ ಈ ಮರ್ಮವನ್ನು ತಿಳಿಯದ ಟ್ರಾಯ್ ಜನ ಸರಿ ಗ್ರೀಕರು ಈ ಮರದ ಕುದುರೆಯನ್ನೇಕೆ ಇಲ್ಲಿ ಬಿಟ್ಟು ಹೋಗಿದ್ದಾರೆ ಇದರ ಗುಟ್ಟೇನು ಎಂದು ಅವನಿಗೆ ಕೇಳುತ್ತಾರೆ.

ಅದಕ್ಕೆ ಅವನು ನಮ್ಮ ಗ್ರೀಕರಿಗೆ ಮಿನರ್ವದೇವತೆಯ ಕೃಪೆಯಿದೆ ಎಂದೇ ಭಾವಿಸಿ ಧೈರ್ಯವಾಗಿ ಯುದ್ಧ ಮಾಡುತ್ತಿದ್ದರು ಆದರೆ ಗ್ರೀಕರ ಯೂಲಿಸಿಸ್ಸನು ನಿಮ್ಮ ಕೋಟೆಯೊಳಗಿರುವ ದೇವ ಮಂದಿರಕ್ಕೆ ನುಗ್ಗಿ ಸೈನಿಕರನ್ನು ಕೊಂದು ದೇವಿಯ ವಿಗ್ರಹವನ್ನು ಕದ್ದು ಗ್ರೀಕ್ ನೆಲದಲ್ಲಿ ಇಟ್ಟಾಗ ದೇವಿಯು ಕೋಪಗೊಂಡು ಕಣ್ಣುಗಳಿಂದ ಬೆಂಕಿ ಜ್ವಾಲೆ ಹರಿಸಿದಾಗ ಗ್ರೀಕ್ ಸೈನಿಕರೆಲ್ಲ ಇಲ್ಲಿಂದ ತಮ್ಮ ದೇಶಕ್ಕೆ ಓಡಿ ಹೋದರು. ತಾವು ಮಾಡಿದ **ತಪ್ಪಿನ ಕ್ಷಮೆಗಾಗಿ ಮಿನರ್ವದೇವತೆಗೆ ಈ ಮರದ ಕುದುರೆಯನ್ನು ಮೀಸಲಾಗಿ ಅರ್ಪಿಸಿದ್ದಾರೆ** .

ಹಾಗಾಗಿ ನೀವು ಉದಾಸೀನ ಮಾಡಿ ಈ ಕುದುರೆಯನ್ನು ಇಲ್ಲೇ ಬಿಟ್ಟರೆ ನಿಮ್ಮ ಸರ್ವನಾಶ ವಾಗುತ್ತದೆ ಹಾಗಾಗಿ ಇದನ್ನು ಅರಮನೆ ಒಳಗೆ ದೇವಾಲಯದಲ್ಲಿ ಇರಿಸಿ ಪೂಜಿಸಿದರೆ ಒಳ್ಳೆಯದಾಗುತ್ತದೆಂದು ಸುಳ್ಳಾಡುತ್ತಾನೆ.

ಜೊತೆಗೆ ಕೋಟೆ ಕಾವಲು ಕಾದಿದ್ದ ಲವೋಕನು ಈ ಕುದುರೆಯ ಹೊಟ್ಟೆಗೆ ಕತ್ತಿಯಿಂದ ತಿವಿದಿದ್ದರಿಂದಲೋ ಏನೋ ಅವನ ಇಬ್ಬರು ಮಕ್ಕಳನ್ನು ಎರಡು ದೊಡ್ಡ ಹಾವುಗಳು ಸಮುದ್ರದಲ್ಲಿ ಕೊಂದು ಪುನಃ ಹಿಂದಿರುಗುವಾಗ ಈ ಮಿನರ್ವದೇವತೆಯ ಕಾಲಕೆಳಗೆ ಮಲಗಿದ್ದರಿಂದ ಟ್ರಾಯ್ ಜನ ಹೆದರಿ ಈ ಮೋಸದ ಮರದ ಕುದುರೆಯನ್ನು ಪೂಜಿಸಲು ಅರಮನೆ ಒಳಗೆ ಬಿಟ್ಟುಕೊಂಡರು.

ಆದರೆ ಎಲ್ಲಾ ಮಲಗಿರಬೇಕಾದರೆ ಅನುಕಂಪದಿಂದ ಒಳಸೇರಿದ ಕುತಂತ್ರಿ ಗ್ರೀಕ್ ಯುವಕ ಸಿನೋನನು ಮರದ ಕುದುರೆಯ ದ್ವಾರ ಪೆಟ್ಟಿಗೆಯನ್ನು ಹೊರಗಡೆಯಿಂದ ತೆಗೆಯುತ್ತಾನೆ. ಆಗ ಈಗಾಗಲೆ ಅದರಲ್ಲಿ ಅಡಗಿ ಕುಳಿತಿದ್ದ ಗ್ರೀಕ್ ಸೈನಿಕರು ಕತ್ತಿ ಹಿಡಿದು ಹೊರಬಂದು ಅರಮನೆಯ ಒಳಗೆಲ್ಲ ಅಡಗಿ ಕುಳಿತರು ಅತ್ತ ಹೊರಗೆ ಅಡಗಿ ಕುಳಿತಿದ್ದ ಗ್ರೀಕ್ ಸೈನಿಕರೂ ಹೊರಗಡೆಯಿಂದ ಆಕ್ರಮಣ ಮಾಡತೊಡಗಿದರು. ಆದರೆ ಟ್ರಾಯ್ ನಗರದ ಜನರೆಲ್ಲ ಗಾಢನಿದ್ರೆಯಲ್ಲಿದ್ದರು ಇವರು ಎಚ್ಚರಗೊಳ್ಳುವಷ್ಟರಲ್ಲಿ ಅನೇಕರು ಸತ್ತುಹೋಗಿದ್ದರು.

**ಗ್ರೀಕ್‌ನ ದೊರೆ 'ಅಕಿಲೀಸನ'** ನೇತೃತ್ವದಲ್ಲಿ ಮಾಡಿದ ಈ ಮೋಸದ ಆಕ್ರಮಣವು **ಟ್ರಾಯ್ ನಗರಕ್ಕೆ ಬೆಂಕಿ ಹಚ್ಚಿ** ಸಂಪೂರ್ಣವಾಗಿ ನಾಶಮಾಡುವ ಉದ್ದೇಶದಿಂದ ಕೂಡಿತ್ತು. ಇನ್ನೂ ಕನಸಿನ ನಿದ್ದೆಯಲ್ಲಿದ್ದ ಈನಿಯಸ್‌ಗೆ **ಹೆಕ್ಟರನು** ಕನಸಿನಲ್ಲಿ ಬಂದು ಗ್ರೀಕ್‌ಗೆ ಬೆಂಕಿಬಿದ್ದಿದೆ ಇಲ್ಲಿಂದ ತಪ್ಪಿಸಿಕೊಂಡು ಹೋಗು ಟ್ರಾಯ್‌ನಗರದ ರಾಜ ಟ್ರಯಾಮ್ ಮತ್ತು ಅವನ **ಮಗಳು ಕೆಸಾಂಡ್ರಾಳ** ಅಧಿಕಾರ ಇಲ್ಲಿಗೆ ನಾಶವಾಗುತ್ತದೆ ಎಂಬ ಸೂಚನೆಯನ್ನು ನೀಡಿದನು.

ನಿದ್ದೆಯಿಂದ ಎದ್ದು ಕಣ್ಣು ಬಿಟ್ಟು ನೋಡಿದರೆ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲ ವಾಗುತ್ತಿತ್ತು. ಟ್ರಾಯ್ನಗರವು ಬೆಂಕಿಯಿಂದ ಸಾಕಷ್ಟು ಹತ್ತಿ ಉರಿದುಹೋಗಿತ್ತು. ಇತ್ತ **ಅಪಾಲೋ ದೇವತೆಯ ಪೂಜಾರಿ 'ಪ್ಯಾಂಥಸ್'**ನು ಆ ದೇವತೆಯ ವಿಗ್ರಹವನ್ನು ಹೊತ್ತು ಕೊಂಡು ಗ್ರೀಕರಿಂದ ತಪ್ಪಿಸಿಕೊಂಡು ಬಂದು ಈನಿಯಸ್‌ನಿಗೆ ಆ ದೇವತೆಯ ವಿಗ್ರಹವನ್ನು ಕೊಟ್ಟು ಇದನ್ನು ಜೋಪಾನವಾಗಿ ಕಾಪಾಡಬೇಕೆಂದೂ, ಟ್ರಾಯ್‌ನಗರ ಇನ್ನು ಉಳಿಯುವುದಿಲ್ಲ ಸಂಪೂರ್ಣವಾಗಿ ನಾಶವಾಗುತ್ತಿದೆ, ಎಲ್ಲೆಲ್ಲೂ ಬೆಂಕಿ ಹಚ್ಚಿದ್ದಾರೆ. ಆ ಗ್ರೀಕ್ ಹುಡುಗ ಸಿನೋನನು ಎಲ್ಲಾಕಡೆ ಬೆಂಕಿಹಚ್ಚಿಕೊಂಡು ಬರುತ್ತಿದ್ದಾನೆ. ಕೋಟೆಯ ಒಳಗೆ ಮತ್ತು ಹೊರಗೆ ಎರಡೂ ಕಡೆ ಸಾವಿರಾರು ಸಂಖ್ಯೆಯ ಸೈನಿಕರಿದ್ದಾರೆ ಎಂದು ಹೇಳುತ್ತಾನೆ.

ಇದರಿಂದ ಕೋಪಗೊಂಡ ಈನಿಯಸ್‌ನು ಟ್ರಾಯ್‌ನಗರ ರಾಜ 'ಪ್ರಯಾಮ'ನನ್ನು ಮತ್ತು ಅವನ ಮಗಳು **'ಕೆಸಾಂಡ್ರ'**ಳನ್ನು ಕಾಪಾಡಬೇಕು ಎಂದುಕೊಳ್ಳುವಷ್ಟರಲ್ಲಿ ಗ್ರೀಕರ ದೊರೆ ಅಕಿಲೀಸನು ಅವರನ್ನು ಸುತ್ತುವರಿದಿದ್ದನು. ಗ್ರೀಕ್ ಶತ್ರುಗಳು ಮಿನರ್ವದೇವಾಲಯಕ್ಕೆ ನುಗ್ಗಿ ಪ್ರಯಾಮ್ ಮತ್ತು ಅವನ ಮಗಳು ಕೆಸಾಂಡ್ರಾಳ ಕೈಗೆ ಬೇಡಿ ಹಾಕಿ ದರದರನೆ ಎಳೆದುಕೊಂಡು ಬರುತ್ತಿದ್ದರು.

ಅಷ್ಟೊತ್ತಿಗಾಗಲೇ ಕೆಸಾಂಡ್ರಾಳನ್ನು ಮದುವೆಯಾಗಬೇಕೆಂಬ ಆಸೆಯಲ್ಲಿದ್ದ **ಕೋರಿಬಸವ** ಮತ್ತು ಇತರರು ಗ್ರೀಕರ ಸೈನಿಕರನ್ನು ಕೊಂದು ಅವರ ಬಟ್ಟೆಗಳನ್ನು ಇವರು ಹಾಕಿಕೊಂಡು ತಾವು ಗ್ರೀಕರೆಂದು ಬಿಂಬಿಸಿ ಗ್ರೀಕ್‌ಸೈನಿಕರ ಬಳಿ ಹೋಗಿ ಅವರನ್ನು ಕೊಲ್ಲುತ್ತಿದ್ದರು. ಆದರೆ ಕೆಸಾಂಡ್ರಾಳನ್ನು ಎಳೆದುಕೊಂಡು ಹೋಗುವುದನ್ನು ನೋಡಿದ ಕೋರೀಬಸವನು ಅವಳನ್ನು ಬಿಡಿಸಲು ಮುಂದಾದನು.

ಇದರಿಂದ ಗ್ರೀಕರ ಅಕಿಲೀಸನಿಗೆ ಇವರೆಲ್ಲ ಗ್ರೀಕರಲ್ಲವೆಂದು ತಿಳಿದು ಇತ್ತ ಗ್ರೀಕರೂ ಇವರನ್ನು ಆಕ್ರಮಣ ಮಾಡತೊಡಗಿದರು. ಅತ್ತ ಕೋಟೆಯ ಮೇಲಿದ್ದ ಟ್ರೋಜನ್ನರೂ ಸಹ ಗ್ರೀಕ್‌ಸೈನಿಕರ ಬಟ್ಟೆಯಲ್ಲಿದ್ದ ಟ್ರೋಜನ್ನರನ್ನು ಗ್ರೀಕರೆಂದೇ ತಪ್ಪು ತಿಳಿದು ಅವರೂ ಬಿಲ್ಲುಬಾಣಗಳಿಂದ ಇವರನ್ನು ಆಕ್ರಮಣ ಮಾಡತೊಡಗಿದರು ಇದರಲ್ಲಿ ಕೋರಿಬಸವ, ಮಿನರ್ವದೇವತೆಯ ಪೂಜಾರಿ ಪ್ಯಾಂಥನೇ ಮೊದಲಾದವರು ಬಲಿಯಾದರು.

ಇತ್ತ ಗ್ರೀಕರ ಮತ್ತೊಬ್ಬ ದೊರೆ 'ಪಿರ್ಹಸನು' ಪ್ರಯಾಮ ರಾಜನ ಅರಮನೆಯ ಹಿಂಬಾಗಿಲಿಂದ ಕಿಂಡಿ ಕೊರೆದು ಅರಮನೆಯ ಗುಪ್ತಸ್ಥಳದಲ್ಲಿದ್ದ ಪ್ರಯಾಮನ ರಾಣಿಯರನ್ನು, ರಾಜಕುಮಾರಿಯರನ್ನು, ಮಕ್ಕಳನ್ನು ಹಾಗೂ ಬಲಿಗಂಬದ ಬಳಿ ದೇವರನ್ನು ತಬ್ಬಿಕುಳಿತಿದ್ದ ಅವನ ರಾಣಿ ಹೆಕ್ಯೂಳರನ್ನು ಸುತ್ತುವರಿದರು. ಇದರಿಂದ ರಾಜ ಪ್ರಯಾಮನಿಗೆ ಸಿಟ್ಟು ಬಂದು ವಯಸ್ಸಾಗಿದ್ದರೂ ಯುದ್ಧಕ್ಕೆ ಸಿದ್ಧನಾದನು. ಅಷ್ಟೊತ್ತಿಗಾಗಲೇ ಪ್ರಯಾಮನ **ಕಿರಿಯ ಮಗ ಪೋಲೈಟೀಸ**ನನ್ನು **(ಹಿರಿಯ ಮಗ ಹೆಕ್ಟರ್** ಈ ಹಿಂದೆಯೇ ಗ್ರೀಕರಿಗೆ ಬಲಿಯಾಗಿದ್ದ) ಗ್ರೀಕರ ಪಿರ್ಹಸ್‌ನು ಹಿಂಬಾಲಿಸಿ ಬಂದು ತಂದೆಯ ಮುಂದೆಯೇ ಈಟಿಯಿಂದ ತಿವಿದುಕೊಂದಿದ್ದನು. ಇದರಿಂದ ಕೋಪಗೊಂಡ ಪ್ರಯಾಮನು ಪಿರ್ಹಸ್‌ನ ಮೇಲೆ ಯುದ್ಧಕ್ಕೆ ಹೋದಾಗ ಮುದಿಯಾದ ಪ್ರಯಾಮರಾಜನ ತಲೆಗೂದಲು ಹಿಡಿದು ಬಲಿಗಂಬದ ಬಳಿ ದರದರನೆ ಎಳೆದುಕೊಂಡು ಹೋಗಿ ಕತ್ತಿಯಿಂದ ರುಂಡ – ಮುಂಡಗಳೆರಡು ಬೇರ್ಪಡುವಂತೆ ಕತ್ತರಿಸಿ ಹಾಕಿದನು.

ಅವನ ಮಗಳು ಕೆಸಾಂಡ್ರಳನ್ನು ಗ್ರೀಕ್ ದೇಶಕ್ಕೆ ಹೊತ್ತೊಯ್ದರು. ಅಲ್ಲಿಯೇ ಅಡಗಿ ಕುಳಿತಿದ್ದ **'ಹೆಲೆನ್'** ರಾಣಿಯು ಈನಿಯಸ್‌ನಿಗೆ ಕಾಣಿಸಿಕೊಂಡಳು ಇವಳು ಗ್ರೀಕ್ ದೇಶದವಳಾದರೂ **'ಪ್ಯಾರಿಸ್'ನ**ನ್ನು ಪ್ರೇಮಿಸಿ ಟ್ರಾಯ್ ನಗರಕ್ಕೆ ಓಡಿ ಬಂದಿದ್ದಳು. ಇವಳ ಕಾರಣದಿಂದಲೇ ಗ್ರೀಕರು ಟ್ರಾಯ್‌ನಗರಕ್ಕೆ ಬೆಂಕಿ ಹಚ್ಚಿದರು. ಇವಳೇನೋ ಹಿಂದಿನ ತನ್ನ ದೇಶಕ್ಕೆ ಹೋಗಿ ತಂದೆ- ತಾಯಿಯರ ಜೊತೆ ಸುಖವಾಗಿರುತ್ತಾಳೆ.

ಆದರೆ ಇವಳಿಂದ ಟ್ರಾಯ್‌ನಗರದ ಜನರೇ ಸಾಯಬೇಕಾಯಿತು. ಹಾಗಾಗಿ ಇವಳನ್ನು ಕೊಂದು ಪ್ರತಿಕಾರ ತೀರಿಸಿಕೊಳ್ಳಬೇಕೆಂದು ಮುಂದಾಗುತ್ತಾನೆ. ಆಗ ಈನಿಯಸ್‌ನ ತಾಯಿ ಪ್ರತ್ಯಕ್ಷಳಾಗಿ ಮಗನೇ ಈ ನಾಶಕ್ಕೆ 'ಪ್ಯಾರಿಸ್ ಆಗಲೀ, ಹೆಲೆನ್' ಆಗಲೀ ಕಾರಣವಲ್ಲ ಅದು ಧೈವೇಚ್ಚೆ ಹಾಗಾಗಿ ಇವಳನ್ನು ಬಿಟ್ಟು ನಿನ್ನ ತಂದೆ, ಹೆಂಡತಿ, ಮಗನು ಎಲ್ಲಿದ್ದಾರೆಂದು ಹುಡುಕಿ ಇಲ್ಲಿಂದ ತಪ್ಪಿಸಿಕೊಂಡು, ಅವರನ್ನು ಕರೆದುಕೊಂಡು ಇಟಲಿ ದೇಶಕ್ಕೆ ಹೋಗಿ ಹೊಸರಾಜ್ಯ ಕಟ್ಟು ಎಂದು ಹೇಳುತ್ತಾಳೆ.

ಇವನ ತಂದೆಯ ಅರಮನೆಗೆ ಹೋಗಿ ಅವನನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು, ಇಲ್ಲಿಂದ ತಪ್ಪಿಸಿಕೊಳ್ಳೋಣವೆಂದು ಅವನಿಗೆ ಹೇಳುತ್ತಾನೆ. ಆದರೆ ಆ ತಂದೆ ತನ್ನ ಕಣ್ಣ ಮುಂದೆಯೇ ಟ್ರಾಯ್ ಸುಟ್ಟುಹೋಗಿದೆ ನಾನೇ ಯುದ್ಧ ಮಾಡಿ ಗ್ರೀಕರ ಮೇಲೆ ಸೇಡು ತೀರಿಸಿಕೊಳ್ಳುತ್ತೇನೆಂದು ಹಠಮಾಡುತ್ತಾನೆ. ಅದಕ್ಕೆ ಈನಿಯಸ್‌ನು 'ಗ್ರೀಕರ ಪಿರ್ಹಸ್ಥರನು ಈಗ ತಾನೆ ಟ್ರಾಯ್‌ನ ರಾಜ ಪ್ರಯಾಮನ ಎದುರೆ ಅವನ ಮಗ ಪೊಲೈಟೀಸನನ್ನು ಕೊಂದು ಪ್ರಯಮನ ರುಂಡವನ್ನು ಕತ್ತರಿಸಿದ್ದಾನೆ, ಈಗ ಇಲ್ಲಿಗೆ ಬಂದರೆ ನಿನ್ನ ಮುಂದೆ ನನ್ನನ್ನು ಕೊಂದು ನಿನ್ನನ್ನು ಕೊಲ್ಲುತ್ತಾನೆ'. ಹಾಗಾಗಿ ನಾನೊಬ್ಬನೇ ತಪ್ಪಿಸಿಕೊಂಡು ಹೋಗುವುದಿಲ್ಲ ನಿನ್ನ ಜೊತೆ ನಾನು ಯುದ್ಧ ಮಾಡಿ ನಿನ್ನೆದುರೇ ಸಾಯುತ್ತೇನೆ ಎಂದಾಗ ಅವನ ತಂದೆ ಮಗನ ಜೊತೆ ಹೋಗಲು ಒಪ್ಪುತ್ತಾನೆ.

ಹೀಗೆ ಈನಿಯಸ್‌ನು ಮುದಿಯಾದ ತಂದೆಯನ್ನು ಹೆಗಲ ಮೇಲೆ ಹೊತ್ತುಕೊಂಡು ತನ್ನ **ಹೆಂಡತಿ 'ಕ್ರೀಯೂಸ್'** ಮತ್ತು **ಮಗ 'ಅಸ್ಕೇನಿಯಸ್'**ನನ್ನು, ಇತರ ಸೈನಿಕರನ್ನು ಕರೆದುಕೊಂಡು ಬೆಳಕಿನ ಪಂಜನ್ನು ಹಿಡಿದು ಆ ರಾತ್ರಿಯೇ ಟ್ರಾಯ್‌ನಗರದಿಂದ ತಪ್ಪಿಸಿಕೊಳ್ಳುತ್ತಾನೆ. ಹಾಗೂ ತಮ್ಮ ಮನೆ ದೇವರ ವಿಗ್ರಹಗಳ ಪೆಟ್ಟಿಗೆಯನ್ನು ತಂದೆಯ ಕೈಗೆ ಕೊಡುತ್ತಾನೆ.

ಇನ್ನೇನು ಆ ಊರಿನಿಂದ ತಪ್ಪಿಸಿಕೊಳ್ಳಬೇಕೆನ್ನುವಷ್ಟರಲ್ಲಿ ಗ್ರೀಕ್‌ನ ಶತ್ರುಗಳು ಇವರನ್ನು ಹಿಂಬಾಲಿಸಿಯೇ ಬರುತ್ತಿರುವುದು ಹೆಗಲ ಮೇಲಿದ್ದ ತಂದೆಗೆ ಕಾಣಿಸುತ್ತದೆ. ಆಗ ಮಗನಿಗೆ ಬೇಗ ಬೇಗ ಹೋಗಲು ಹೇಳುತ್ತಾನೆ. ಇಚಿಥ ಸಂದರ್ಭದಲ್ಲಿ, ಈ ಕತ್ತಲ ಗೊಂದಲದಲ್ಲಿ ಅವನ ಹೆಂಡತಿ ದುರಾದೃಷ್ಟವಶದಿಂದ ತಪ್ಪಿಸಿಕೊಂಡು ಬಿಡುತ್ತಾಳೆ.

ಮುಂದೆ ಒಂದು ಮರದ ಕೆಳಗೆ ಇನ್ನಿತರ ಟ್ರಾಯ್ ಜನರೆಲ್ಲ ಒಂದುಗೂಡುತ್ತಾರೆ. ಆದರೆ ಅವನ ಹೆಂಡತಿ ಕ್ರಿಯೂಸಳು ಇಲ್ಲದುದನ್ನು ಕಂಡು ತಂದೆ, ಮಗ, ದೇವರ ಪೆಟ್ಟಿಗೆಯನ್ನು ಇತರರ ಕೈಗೆ ಕೊಟ್ಟು ಪುನಃ ಆ ಕತ್ತಲಲ್ಲಿ ಬಂದ ದಾರಿಯಲ್ಲೇ ಹೆಂಡತಿಯನ್ನು ಹುಡಿಕಿಕೊಂಡು ಹಿಂದಕ್ಕೆ ಬರುತ್ತಾರೆ. ಆದರೆ ಅಷ್ಟೊತ್ತಿಗಾಗಲೆ ಗ್ರೀಕರು ಇಡೀ ನಗರ, ಅವನ ಮನೆ ಎಲ್ಲವನ್ನು ಸುಟ್ಟು ಭಸ್ಮಮಾಡಿ ಸಂಪತ್ತನ್ನು ಲೂಟಿ ಮಾಡುತ್ತಿರುತ್ತಾರೆ. ಅವಳ ಹೆಸರಿಡಿದು ಎಷ್ಟೇ ಜೋರಾಗಿ ಕೂಗಿಕೊಂಡು ಕರೆದರೂ ಅವಳು ಬರಲಿಲ್ಲ ಆದರೆ ಅವಳ ಪ್ರೇತ ಕಾಣಿಸಿಕೊಂಡು ತಾನು ಗ್ರೀಕರಿಂದ ಕೊಲೆ ಯಾಗಿರುವುದಾಗಿ ಹೇಳುತ್ತಾಳೆ.

ಅವನನ್ನು ಸಮಾಧಾನ ಮಾಡಿ ನಿನಗೆ ಮುಂದೊಬ್ಬಳು ಒಳ್ಳೆಯ ಹೆಣ್ಣು ಹೆಂಡತಿಯಾಗುತ್ತಾಳೆ. ಅವಳನ್ನು ಮದುವೆಯಾಗಿ ರಾಜ್ಯಕಟ್ಟಿ ಸುಖವಾಗಿರು. ಸದ್ಯ ನಾನು ಗ್ರೀಕರ ಬಂದಿಯಾಗಿ ಇನ್ನಾವನಿಗೋ ಹೆಂಡತಿಯಾಗಿ, ಗುಲಾಮಳಾಗಿ ನರಕ ಅನುಭವಿಸುವುದಕ್ಕೆ ಮುಂಚೆಯೇ ಸತ್ತಿದ್ದೇನೆ ಅದೇ ನನ್ನ ಪುಣ್ಯ ಎಂದು ಹೇಳಿ ಮಾಯವಾಗುತ್ತಾಳೆ.

ಈಗ ಅವನು ಹತಾಶೆಯಿಂದ ಹಿಂದಿರುಗಿ ಮತ್ತೆ ತನ್ನ ತಂದೆಯನ್ನು ಹೆಗಲಮೇಲೆ ಹೊತ್ತು ಇತರ ಟ್ರೋಜನರೊಂದಿಗೆ ಇಟಲಿಯತ್ತ ಹೊರಡುತ್ತಾನೆ. ಮುಂದೆ ಟ್ರಾಯ್‌ನ ಸಮೀಪವಿರುವ ಥ್ರೇಸ್‌ನಾಡಿನಲ್ಲಿ ದೇವರನ್ನು ಪೂಜಿಸಿ, ಅನೇಕ ಪ್ರಾಣಿಗಳನ್ನು ಬಲಿಕೊಟ್ಟು, ಅಲ್ಲಿದ್ದ ಗಿಡವನ್ನು ಬುಡ ಸಮೇತ ಕಿತ್ತಾಗ ಅದರಿಂದ ರಕ್ತದ ಹಳಿಗಳು ಬುಗ್ಗೆಯಂತೆ ಹರಿಯಿತ್ತದೆ. ಇದರಿಂದ ಭಯಗೊಂಡು ಪುನಃ ಗಿಡದ ಬುಡವನ್ನು ಕಿತ್ತಾಗ ಜೋರಾಗಿ ಅಳುವ ಆರ್ಥನಾದ ಕೇಳಿಸುತ್ತದೆ. ಆಗ ಆ ವ್ಯಕ್ತಿಯು 'ಓ ಈನಿಯಸ್ ಬುಡವನ್ನು ಕೀಳಬೇಡ, ನಾನು ಟ್ರಾಯ್‌ನವನೇ ಈ ನೆಲದಲ್ಲಿ ಸತ್ತ ಮನುಷ್ಯರೆಲ್ಲ ನೆಲದ ಗೋರಿಯಲ್ಲಿ ಗಿಡವಾಗಿದ್ದಾರೆ, ಗ್ರೀಕರು ಚುಚ್ಚಿದ ಕತ್ತಿ, ಈಟಿಗಳಿಂದ ರಕ್ತ ಸುರಿದು ನರಳಾಡುತ್ತಿದ್ದೇವೆ, ಮತ್ತೆ ಬುಡಗಿತ್ತು ನಿನ್ನ ಕೈಯಿ ಅಪವಿತ್ರಗೊಳಿಸಿಕೊಳ್ಳದೆ ಮೊದಲು ಇಲ್ಲಿಂದ ಹೊರಟು ಇಟಲಿಯಲ್ಲಿ ಹೊಸ ರಾಜ್ಯ ಕಟ್ಟು' ಎಂದು ಬೇಡಿಕೊಳ್ಳುತ್ತಾನೆ.

ಟ್ರಾಯ್‌ನಗರದ ದೊರೆ ಪ್ರಯಾಮ್‌ನ ಕಡೆಯಿದ್ದವರೆ ಅವನಿಗೆ ಮೋಸ ಮಾಡಿ **ಗ್ರೀಕರ ಅಗಮೆಮ್ನನ್** ಕಡೆ ಸೇರಿಕೊಂಡಿದ್ದರಿಂದ ಅಂದರೆ ನಂಬಿದವರೇ ಬೆನ್ನಿಗೆ ಚೂರಿ ಹಾಕಿದ್ದರಿಂದ ಗ್ರೀಕರು ಇಂದು ಟ್ರಾಯ್‌ನಗರವನ್ನು ನಾಶಮಾಡುವಂತಾಯಿತು. ನಂಬಿದವರೇ ಚಿನ್ನ, ಸಂಪತ್ತು, ಆಸ್ತಿಯ ಆಸೆಗಾಗಿ ನಂಬಿದವರ ಸ್ನೇಹ, ವಿಶ್ವಾಸಗಳನ್ನೆಲ್ಲ ಗಾಳಿಗೆ ತೂರಿದ ಈ ನೆಲದಿಂದ ಮೊದಲು ಹೋಗಬೇಕೆಂದು ಹೇಳುತ್ತಾನೆ.

ಆಗ ಅವರು ಅಲ್ಲಿಂದ ಸಮುದ್ರಯಾನ ಮಾಡಲು ತೊಡಗುತ್ತಾರೆ. ಮುಂದೆ ಡಿಲೋಸ್ ದ್ವೀಪವನ್ನು ತಲುಪುತ್ತಾರೆ. ಅಲ್ಲಿನ ರಾಜ 'ಅನಿಯಸ್'ನು ಈನಿಯಸ್‌ನ ತಂದೆಗೆ ಹೆಚ್ಚು ಪರಿಚಿತನಾದುದರಿಂದ ಅವನ ಸಹಾಯವೂ ಇವರಿಗೆ ಸಿಗುತ್ತದೆ. ಅಂದು ರಾತ್ರಿ ತಾವು ತಂದಿದ್ದ ದೇವರ ವಿಗ್ರಹಗಳು ಪ್ರತ್ಯಕ್ಷವಾಗಿ ಈನಿಯಸ್‌ನಿಗೆ ಧೈರ್ಯ ತುಂಬಿ ಭವಿಷ್ಯ ಹೇಳುತ್ತವೆ. ನೀವು ಎಷ್ಟೇ ತೊಂದರೆ ಬಂದರೂ ಸಹಿಸಿಕೊಂಡು ಫಲವತ್ತಾದ ನೆಲವಾದ ಇಟಲಿ ದೇಶಕ್ಕೆ ಹೋಗು, ಅದೇ ನಿಮ್ಮ ಪೂರ್ವಿಕರ ಮೂಲ ನೆಲ, ಅಲ್ಲಿ ಹೊಸರಾಜ್ಯ ಕಟ್ಟಿರಿ ಎನ್ನುತ್ತವೆ.

ಹೀಗೆ ಥ್ರೇಸ್‌ನಾಡಿಂದ ಕ್ರೀಟ್ ದ್ವೀಪಕ್ಕೆ ಹೋಗಿ ಅಲ್ಲಿಂದ ಇಟಲಿ ಕಡೆಗೆ ಮುಖ ಮಾಡಿ ಹೊರಟರು. ನಂತರ ಸ್ಟ್ರೋಫೇಡೀಸ್ ದ್ವೀಪ ತಲುಪಿ ಅಲ್ಲಿ ಕೆಲವು ದನ, ಮೇಕೆ ಪ್ರಾಣಿಗಳನ್ನು ಕೊಂದು ಊಟ ಮಾಡುವ ಸಮಯಕ್ಕೆ ಅಲ್ಲಿಂದ ಹಾರ್ಪಿ ಹಕ್ಕಿಗಳು ಆ ಊಟವನ್ನು ಕದ್ದೊಯ್ಯುತ್ತಿದ್ದವು. ಆಗ ಇವರು ಕತ್ತಿ ಹಿಡಿದು ಅವನ್ನು ಕೊಲ್ಲಲು ಮುಂದಾದರು, ಆಗ ಅದರಲ್ಲಿದ್ದ ಒಂದು ಹಕ್ಕಿ ಇವರ ಭವಿಷ್ಯವನ್ನು ನುಡಿಯಿತು.

ಅದೇನೆಂದರೆ ನೀವು ಟ್ರಾಯ್‌ನಗರದಿಂದ ಇಟಲಿಗೆ ಹೋಗಿ ಹೊಸನಗರ ಕಟ್ಟುತ್ತೀರ, ಒಳ್ಳೆಯ ಮಾರುತ ಬೀಸಿ ಇಟಲಿ ತಲುಪುತ್ತೀರ, ನೀವು ಭೀಕರವಾದ ಕ್ಷಾಮಕ್ಕೆ ಸಿಲುಕಿ ಹಸಿವಿನಿಂದ ನರಳಾಡುತ್ತೀರ, ಆಗ ನಿಮ್ಮ ಮುಂದಿರುವ ತಟ್ಟೆಗಳನ್ನು ನೀವೆ ತಿನ್ನುತ್ತೀರ ಆ ನಂತರ ನೀವು ಇಟಲಿಯಲ್ಲಿ ನಗರವನ್ನು ಕಟ್ಟಬಹುದು, ಆದರೆ ನಮ್ಮ ನೆಲಕ್ಕೆ ಬಂದು ನಮ್ಮ ಪ್ರಾಣಿಗಳನ್ನೇ ಕೊಂದು ನಮ್ಮ ಮೇಲೆಯೇ ಆಕ್ರಮಣ ಮಾಡಿದ್ದೀರ ಅದಕ್ಕೆ ತಕ್ಕ ಶಿಕ್ಷೆ ಅನುಭವಿಸುತ್ತೀರ ಎನ್ನುತ್ತದೆ.

ಇಲ್ಲಿ ಒಂದು ವಿಶೇಷ ಸುದ್ಧಿ ಇವನಿಗೆ ಕಾದಿತ್ತು ಅದೇನೆಂದರೆ, ಟ್ರಾಯ್‌ನಗರದ ದೊರೆ ಪ್ರಯಾಮನ ಹಿರಿಯ ಮಗ ಹೆಕ್ಟರನನ್ನು ಕೊಂದ ಗ್ರೀಕರ ಪಿರ್ಹಸನು ಅವನ ಹೆಂಡತಿ **ಆಂಡ್ರೋಮಕಿ**ಯನ್ನು ಮದುವೆ ಮಾಡಿಕೊಂಡಿದ್ದನು.

ಈಗ ವಿಚಿತ್ರವೆಂದರೆ ಅದೇ ಗ್ರೀಕ್ ದೇಶದಲ್ಲಿ ಪ್ರಯಾಮನ ಎರಡನೇ ಮಗನಾದ ಹೆಲೀನಸನು ಅಲ್ಲಿ ಹಿಂದೆ ಆಳುತ್ತಿದ್ದ ಪಿರ್ಹಸನ ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಅವನ ಪತ್ನಿಯಾದ ಅದೇ ಆಂಡೋಮಕಿಯನ್ನು ಮದುವೆಯಾಗಿದ್ದು **ತನ್ನ ಅತ್ತಿಗೆಯನ್ನೇ ವರಿಸಿದಂತಾಗಿ** ಪುನಃ ಟ್ರಾಯ್‌ನ ರಕ್ತಸಂಬಂಧವೇ ಆಗಿತ್ತು. ಹಾಗಾಗಿ ಅವನನ್ನೇ ಕೇಳಿತಿಳಿಯಲು ಈನಿಯಸ್‌ನು ಅವನ ಬಳಿಹೋಗುತ್ತಿರ ಬೇಕಾದರೆ ಇವನಿಗೆ ಆಂಡ್ರೋಮಕಿಯು ಸಿಕ್ಕಿ, **ತಾನು ಈಗಲು ತನ್ನ ಮೊದಲ ಗಂಡ ಹೆಕ್ಟರನ ನೆನಪಿನಲ್ಲಿಯೇ ಇದ್ದೇನೆ** ಎನ್ನುತ್ತಾಳೆ. ಗ್ರೀಕ್ ನೆಲದಲ್ಲಿ ಟ್ರೋಜನ್ ವೇಷದ ಈನಿಯಸ್‌ನನ್ನು ಕಂಡು ಭಯಾಶ್ಚರ್ಯದಿಂದ ನೋಡುತ್ತಾಳೆ. ತನ್ನ ದುಃಸ್ಥಿತಿಯು ಬೇರೆ ಯಾವ ಹೆಣ್ಣಿಗೂ ಬರಬಾರದೆಂದು ದುಃಖಿಸಿ ತನ್ನ ಪಾಡನ್ನು ಹೇಳುತ್ತಾಳೆ.

ಸೆರೆ ಸಿಕ್ಕ ಹೆಣ್ಣು ಬದುಕಿ ಶತ್ರುಗಳ ಕೈಗೆ ಮಾತ್ರ ಸಿಗಬಾರದು, ಸೆರೆ ಸಿಕ್ಕರೆ ಯಾವ ಯಾವನ ಕಾಮತೃಷೆಯನ್ನು ತಣಿಸಬೇಕಾಗುತ್ತದೆ. ನಂತರ ಬೇರೆ ಬೇರೆಯವರಿಗೆ ಹಂಚಿಕೆಯಾಗಬೇಕಾಗುತ್ತದೆ, ಯಾರ ಯಾರ ಮನೆಯ ಚಾಕರಿಯನ್ನೋ ಮಾಡಬೇಕಾಗುತ್ತದೆ. ನಾನಾದರೋ **ಗ್ರೀಕ್‌ನ ರಾಜ ಅಕೀಲೀಸನ ಮಗ ಪಿರ್ಹಸನ ಕಾಮಕ್ಕೆ ಬಲಿಯಾಗಿ** ಅವನಿಂದ ತಿರಸ್ಕೃತಳಾಗಿ, ಅವನ ಅಹಂಕಾರ, ದರ್ಪಕ್ಕೆ ಗುರಿಯಾದೆನು, ಅವನ ಸಮುದ್ರದ ಪ್ರಯಾಣದಲ್ಲಿ ನಾನು ಎದ್ದು ಬಿದ್ದು ಹೋಗಬೇಕು. ಅವನ ಗು**ಲಾಮಳಾಗಿ ಅವನ ಮಗುವಿಗೆ ತಾಯಿಯಾಗಬೇಕಾಯಿತು**. ಹೀಗಿರುವಾಗ ಆ **ಪಿರ್ಹಸನು ಹೆಲೆನ್ನಳ ಮಗಳು ಹರ್ಮಿಯೋನಳನ್ನು ಮದುವೆಯಾಗಬೇಕೆಂದು ಬಯಸಿ** ಇವಳನ್ನು ಇನ್ನೊಬ್ಬ ಗುಲಾಮ ಹೆಲೀನಸನ ಪಾಲಿಗೆ ಬಿಟ್ಟುಕೊಟ್ಟನು.

ಆದರೆ ದೈವೇಚ್ಛೆ ಬೇರೆಯಾಗಿತ್ತು, ಆ ಹರ್ಮಿಯೋಳನ್ನು ಮದುವೆಯಾಗಬೇಕೆಂದಿದ್ದ **ಒರಿಸ್ಟೀಸನು ಪಿರ್ಹಾಸನನ್ನು ಬಲಿ ಕಂಬದ ಬಳಿ ಎಳೆದು ತಂದು ಕೊಂದು ಹಾಕಿದನು.** ಹೀಗೆ ಅವನು ಸತ್ತ ಮೇಲೆ ಅವನ ಒಂದು ಭಾಗದ ಪಾಲು ಹೆಲೀನಸನಿಗೆ ಬಂದು ಈಗ ಅವನ ಹೆಂಡತಿಯಾಗಿದ್ದೇನೆ ಎನ್ನುತ್ತಾಳೆ. ಅಷ್ಟೊತ್ತಿಗಾಗಲೇ ಪ್ರಯಾಮನ ಮಗ ಹೆಲೀಸನು ತನ್ನ ಪರಿವಾರದೊಂದಿಗೆ ಅಲ್ಲಿಗೆ ಬಂದನು. ಹೆಲೀನಸನಾದರು ಅಪಲೋ ದೇವತೆಯಿಂದ ಭವಿಷ್ಯ ಹೇಳುವುದನ್ನು ಕಲಿತಿದ್ದು ಈನಿಯಸ್‌ನ ಮುಂದಿನ ಭವಿಷ್ಯವನ್ನು ಹೇಳುತ್ತಾನೆ.

ಜೋವ್ ದೇವತೆಯ ಅನುಗ್ರಹ ನಿನ್ನ ಮೇಲಿದೆ, ಜೂನೋದೇವತೆ ನಿನಗೆ ತೊಂದರೆ ಕೊಡುತ್ತಾಳೆ.

ಇಟಲಿ ಹತ್ತಿರವಿದ್ದರೂ ನಿನ್ನ ಪಾಲಿಗದು ದೂರ ಯಾಕೆಂದರೆ ಅನೇಕ ತೊಂದರೆ ಗಳನ್ನು ನೀನು ಸಮುದ್ರದಲ್ಲಿ ಅನುಭವಿಸುತ್ತೀಯಾ, ಸಿಸಿಲಿ, ಇಟಲಿ ಸಮುದ್ರ ದಾಟಬೇಕು ನಂತರ **ಮಾಟಗಾತಿ ಸಿರ್ಸಿದೇವತೆ** ಈ ದ್ವೀಪದ ಹತ್ತಿರ ಬರಬೇಕು, ನಂತರ **ಅದೋಲೋಕದ** ನದೀ ದಾಟಬೇಕು, ನಿರ್ಜನವಾದ ಅರಣ್ಯದ ಬಳಿ ಹೋಗಬೇಕು, ಒಂದು ನದಿಯ ದಡದಲ್ಲಿ ಓಕ್ ಮರಗಳ ಕೆಳಗೆ ಒಂದು ಹಂದಿ ಆಗತಾನೆ ಮೂವತ್ತು ಮರಿಗಳನ್ನು ಹಾಕಿರುತ್ತದೆ. ಅವೆಲ್ಲವೂ ಬಿಳಿಯ ಬಣ್ಣದವೇ, ಅದು ಮಲಗಿರುವಾಗಲೇ ಮರಿಗಳಿಗೆ ಹಾಲುಣಿಸುತ್ತಿರುತ್ತದೆ. ಅದೇ ಜಾಗದಲ್ಲಿ ನೀನು ಹೊಸನಗರವನ್ನು ಕಟ್ಟಬೇಕು, ಅಲ್ಲಿಗೆ ನಿನಗೆ ಬಂದಿರುವ ಕಷ್ಟಗಳೆಲ್ಲ ಮುಗಿಯುತ್ತವೆ. ಆಗ ನೀವು ಊಟ ಮಾಡುವ ತಟ್ಟಗಳನ್ನೇ ತಿನ್ನಬೇಕಾಗುತ್ತದೆ. ಆದರೆ ಅದು ಆಹಾರವೇ ಹೊರತು ನಿಜವಾದ ತಟ್ಟೆ ತಿನ್ನುವ ಪರಿಸ್ಥಿತಿ ಏನಲ್ಲ ಎನ್ನುತ್ತಾನೆ.

ಅಲ್ಲಿಗೆ ಹೋದ ಮೇಲೆ ದೇವತೆಗೆ ಬಲಿಕೊಡಬೇಕು ಹೀಗೆ ಪೂಜಿಸುವಾಗ ತಲೆಗೆ ಕೆಂಪು ವಸ್ತ್ರ ಸುತ್ತಿಕೊಳ್ಳಬೇಕು. ಇದು ನಿಮ್ಮ ಮುಂದಿನ ಧಾರ್ಮಿಕ ವಿಧಿಯಾಗಿ ಆಚರಿಸಿಕೊಂಡು ಬನ್ನಿ ಎನ್ನುತ್ತಾನೆ.

ಆದರೆ ಇಟಲಿಗೂ ಮುಂಚೆ ಭೂಕಂಪದಿಂದುಂಟಾದ ಸಿಸಿಲಿ ದ್ವೀಪವಿದೆ. ಅದರಲ್ಲಿ **ಸೊಂಟದವರೆಗೂ ಹೆಣ್ಣಿನಾಕೃತಿ, ಸೊಂಟದ ಕೆಳಭಾಗ ಡಾಲ್ಫಿನ್ನಿನಂತೆ** ಉದ್ದ ಬಾಲವಿರುವ **ಸಿಲಿಪಿಶಾಚಿ**, ಮತ್ತು **ಕ್ಯಾರಿಬ್ಡಿಸ್ ಪಿಶಾಚಿಯು** ಸಮುದ್ರದ ತಳದವರೆಗೂ ನೀರು ಕುಡಿದು ಆ ಮೇಲೆ ಆ ನೀರನ್ನು ಮೂರು ಸಲ ಉಗುಳಿ ಹೊರಹಾಕುತ್ತದೆ. ಹಾಗಾಗಿ ಅದನ್ನು ಸುತ್ತುವರಿದುಕೊಂಡೇ ಹೋಗಬೇಕು ಮತ್ತು ಎಷ್ಟೇ ತೊಂದರೆ ಬಂದರೂ ಅಪಾಲೋ ದೇವತೆಯ ಪೂಜಾರಿಣಿ ಸಿಬಿಲಳಿಗೆ ಮೈಮೇಲೆ ದೇವರು ಬರುವುದರಿಂದ ಆ ಭವಿಷ್ಯ ಹೇಳುವ ಪ್ರವಾದಿನಿಯನ್ನು ಮಾತಾಡಿಸಿಯೇ ಮುಂದಿನ ದಾರಿ ತಿಳಿದುಕೊಳ್ಳಬೇಕೆಂದು ಹೇಳುತ್ತಾನೆ.

ನಂತರ ಆ ದಂಪತಿಗಳಿಬ್ಬರೂ ಈನಿಯಸ್‌ನನ್ನು ಕಳಿಸಿಕೊಡುತ್ತಾರೆ. ಇವರು ಮುಂದೆ ಸಾಗಿದಾಗ ಕ್ಯಾರಿಬ್ಡಿಸ್ ಪಿಶಾಚಿಯು ತಳದವರೆಗೂ ಸಮುದ್ರ ನೀರು ಕುಡಿಯುವಾಗ ಮತ್ತು
ಹೊರಹಾಕುವಾಗ ಇವರ ಹಡಗುಗಳು ಆಕಾಶದೆತ್ತರಕ್ಕೆ ಹಾರಿ ಪಾತಾಳದವರೆಗೂ ಮುಳುಗಿ ಎದ್ದುದರಿಂದ ಇವರಿಗೆ ದಿಕ್ಕೇತೋಚದಂತಾಯಿತು.

ಮುಂದೆ ಅದೇ ಜಾಗದಲ್ಲಿ ಟ್ರೋಜನ್ ಯುದ್ಧಕ್ಕೆ ಬಂದು ತಪ್ಪಿಸಿಕೊಂಡಿದ್ದ ಗ್ರೀಕ್ ಸೈನಿಕನೊಬ್ಬನು ಅಸ್ಥಿಪಂಜರದಂತೆ ಇದ್ದು ಒಬ್ಬ ರಾಕ್ಷಸನಿಂದ ಅವನು ತಪ್ಪಿಸಿಕೊಂಡು ಬಂದಿದ್ದು ಅವನನ್ನು ಇವರ ಜೊತೆ ಕರೆದುಕೊಂಡು ಹೋಗಬೇಕೆಂದು, ಇಲ್ಲದಿದ್ದರೆ **ಸೈಕ್ಲೋಪ್ಸ್ ರಾಕ್ಷಸನು ಮನುಷ್ಯನ ರಕ್ತ ಮಾಂಸಗಳನ್ನು ತಿನ್ನುವವನು ನನ್ನನ್ನು ಕೊಂದು ತಿನ್ನುತ್ತಾನೆ**, ಅವನ ಗುಹೆಯಿಂದ ತಪ್ಪಿಸಿಕೊಂಡು ಬಂದಿದ್ದೇನೆ ಎಂದು ಹೇಳುತ್ತಾನೆ.

ಯಾಕೆಂದರೆ ಈ ಹಿಂದೆ ನಮ್ಮ ಗ್ರೀಕರ ಸೈನಿಕರು ಇವನಲ್ಲಿ ಸಿಕ್ಕಿಬಿದ್ದಾಗ ಅವನ ಹಣೆಯಲ್ಲಿದ್ದ **ಒಂದೇ ಒಂದು ಕಣ್ಣನ್ನು** ಸುಟ್ಟು ಅವನನ್ನು ಕುರುಡನನ್ನಾಗಿ ಮಾಡಿದ್ದೇವೆ, ಈಗ ಅವನು **ಶಬ್ಧವನ್ನು ಕೇಳಿಸಿಕೊಂಡು ಮಾತ್ರ ಮನುಷ್ಯರನ್ನು ಹಿಡಿಯಬೇಕು ಕಣ್ಣು ಕಾಣುವುದಿಲ್ಲ** ಎನ್ನುತ್ತಾನೆ.

ಅಷ್ಟೊತ್ತಿಗೆ ಆ ದೈತ್ಯ ರಾಕ್ಷಸ ಆ ಸಮುದ್ರದ ಕಡೆಯಿಂದ ಇವರಿರುವ ಕಡೆಯೆ ಬಂದಿದ್ದರಿಂದ ಈನಿಯಸ್‌ನ ಕಡೆಯವರು ಆ ಗ್ರೀಕ್ ಸೈನಿಕರನ್ನು ತಮ್ಮ ಹಡಗಿಗೆ ಹತ್ತಿಸಿಕೊಂಡು ಅಲ್ಲಿಂದ ತಪ್ಪಿಸಿಕೊಂಡು ಬರುತ್ತಾರೆ. ಇದರಿಂದ ಆ ರಾಕ್ಷಸ ಚೀರಾಡತೊಡಗುತ್ತಾನೆ. ಯಾವ ಕಾರಣಕ್ಕೂ ಪುನಃ ಇವರು ಕ್ಯಾರಿಬ್ಡಿಸ್ ಮತ್ತು ಸಿಸಿಲಿ ಪಿಶಾಚಿ ಇರುವ ದ್ವೀಪದ ಕಡೆಯಿಂದ ಪ್ರಯಾಣ ಮಾಡದೆ, ಅದನ್ನು ಸುತ್ತುಹಾಕಿಕೊಂಡು ಮುಂದೆ ಸಾಗುತ್ತಾರೆ. ಇಲ್ಲಿಯೇ ಈನಿಯಸ್‌ನ **ತಂದೆ ಅಂಕೈಸಿಸಿ ಸತ್ತುಹೋದನು**. ಅಲ್ಲೇ ಅವನಿಗೆ ಶವಸಂಸ್ಕಾರ ಮಾಡಿ ಅಲ್ಲಿಂದ ಮುಂದಕ್ಕೆ ಹೋಗಬೇಕಾಯಿತೆಂದು ಆ ಡೈಡೋ ರಾಣಿಗೆ ಈನಿಯಸ್ ತನ್ನ ಕಥೆಯನ್ನು ಹೇಳುತ್ತಾನೆ.